ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003

KARNATAKA SECONDARY EDUCATION EXAMINATION BOARD,
6th CROSS, MALLESWARAM, BANGALORE – 560 003

# ರಾಜ್ಯ ಮಟ್ಟದ ಎಸ್.ಎಸ್.ಎಲ್.ಸಿ. ಪೂರ್ವಸಿದ್ಧತಾ ಪರೀಕ್ಷೆ, ಫೆಬ್ರವರಿ 2020

# STATE LEVEL SSLC PREPARATORY EXAMINATION, FEBRUARY 2020

ಸಂಕೇತ ಸಂಖ್ಯೆ : **01-K** | Code No. : **01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

ದಿನಾಂಕ : 17. 02. 2020 ] | [ Date : 17. 02. 2020

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] | [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ] | [ Max. Marks : 100

---

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $6 \times 1 = 6$

1. 'ದಿಗಂತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

   (ಎ) ಆದೇಶ ಸಂಧಿ (ಬಿ) ಗುಣ ಸಂಧಿ

   (ಸಿ) ಜಶ್ತ್ವ ಸಂಧಿ (ಡಿ) ಅನುನಾಸಿಕ ಸಂಧಿ

2. ಒಂದು ಪದವನ್ನೋ, ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ, ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ

   (ಎ) ಅರ್ಧವಿರಾಮ (ಬಿ) ಆವರಣ

   (ಸಿ) ಉದ್ಧರಣ (ಡಿ) ಅಲ್ಪವಿರಾಮ

3. ರೂಢನಾಮಪದಕ್ಕೆ ಉದಾಹರಣೆಯಾದ ಪದವಿದು

(ಎ) ನದಿ (ಬಿ) ವಿಜ್ಞಾನಿ

(ಸಿ) ಶಂಕರ (ಡಿ) ಕುರುಡ

4. 'ಗಿರಿವನದುರ್ಗಗಳು' ಪದದಲ್ಲಿರುವ ಸಮಾಸ

(ಎ) ತತ್ಪುರುಷ ಸಮಾಸ (ಬಿ) ದ್ವಿಗು ಸಮಾಸ

(ಸಿ) ದ್ವಂದ್ವ ಸಮಾಸ (ಡಿ) ಬಹುವ್ರೀಹಿ ಸಮಾಸ

5. ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು; ಆದ್ದರಿಂದ ವೀರೇಶ್ವರ ಪಾಠಕರವರು ಮಲೇರಿಯಾದಿಂದ ಬಳಲಬೇಕಾಯಿತು. – ಈ ವಾಕ್ಯವು

(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ

(ಸಿ) ಮಿಶ್ರವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

6. ಸಂಬಂಧಾರ್ಥಕಾವ್ಯಯಕ್ಕೆ ಉದಾಹರಣೆಯಾದ ಪದವಿದು

(ಎ) ಚೆನ್ನಾಗಿ (ಬಿ) ಸಾಕು

(ಸಿ) ಸುಯ್ಯನೆ (ಡಿ) ಅಥವಾ

II. **ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 × 1 = 4**

7. ವಂಧ್ಯಾ : ಬಂಜೆ :: ವ್ಯಯ : ......................... .

8. ಅಮಾನತು : ಅರಬ್ಬಿ :: ಬಂದೂಕು : ......................... .

9. ಕೃತ್ರಿಮ : ಮೋಸ :: ಕೂರ್ಮೆ : ......................... .

10. ಸಿರಿತನ : ತದ್ಧಿತಾಂತ ಭಾವನಾಮ :: ಅಂಜಿಕೆ : ......................... .

III. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 7 × 1 = 7

11. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನೇನನ್ನು ಸಂಗ್ರಹಿಸಿದ್ದಳು ?

12. ಆಂಗ್ಲರ ಸಾಮ್ರಾಜ್ಯ ವೈಭವವು ಲಂಡನ್ನಿನ ಯಾವ ಓಣಿಯಲ್ಲಿ ಕಂಡುಬರುತ್ತದೆ ?

13. ಶಾನುಭೋಗರು ಚಿಕ್ಕನಾಯಕನಹಳ್ಳಿಗೆ ಏಕೆ ಹೋಗಿದ್ದರು ?

14. ದುಷ್ಟಬುದ್ಧಿಯ ತಂದೆಯ ಹೆಸರೇನು ?

15. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ ?

16. ದ್ರೋಣನು ತನ್ನ ಮಗನಾದ ಅಶ್ವತ್ಥಾಮನೊಡಗೂಡಿ ಯಾರ ಬಳಿಗೆ ಬಂದನು ?

17. ಕವಯಿತ್ರಿ ವಿಜಯಶ್ರೀ ಸಬರದ ಅವರ ಪ್ರಕಾರ ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಹೇಗೆ ನಿಂತಿವೆ ?

IV. **ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 10 × 2 = 20

18. ಆಂಗ್ಲರು ಹೆಣ್ಣು ಮಕ್ಕಳನ್ನು ಸತ್ಕರಿಸುವ ಪರಿಯನ್ನು ಲೇಖಕರು ಹೇಗೆ ವ್ಯಕ್ತಪಡಿಸಿದ್ದಾರೆ ?

19. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?

20. ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು ?

21. ಯಶೋಭದ್ರೆಯು ಅರಸನ ಆಗಮನಕ್ಕಾಗಿ ಹೇಗೆ ಸಿದ್ಧತೆಯನ್ನು ಮಾಡಿಕೊಂಡಳು ?

22. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು ?

23. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು ?

24. ಶೂದ್ರರು, ಅಸ್ಪೃಶ್ಯರ ಬಗ್ಗೆ ಸ್ವಾಮಿ ವಿವೇಕಾನಂದರ ಅಭಿಪ್ರಾಯವೇನು ?

25. ಭಗತ್‌ಸಿಂಗ್ ತನ್ನ ಸಹಚರರೊಡನೆ ವೀರಯೋಧನಾಗಿ ಅಮರನಾದುದು ಹೇಗೆ ತಿಳಿಸಿ.

26. ಭಯದಿಂದಲೇ ಪ್ರವೇಶಿಸಿದ ಸುಂದರಿಗೆ ಅರಮನೆ ಮತ್ತು ಮೃಗ ಹೇಗೆ ಕಂಡುಬಂದವು ?

27. 'ಗರಕೆಯ ಹುಲ್ಲು' ಎಂಬ ಉತ್ತರ ಬರುವ ಒಗಟಿನ ವಿಶೇಷತೆಯನ್ನು ತಿಳಿಸಿ.

V. **ಈ ಕೆಳಗಿನ ಕವಿಗಳ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** $2 \times 3 = 6$

28. ಸಾರಾ ಅಬೂಬಕ್ಕರ್

29. ಲಕ್ಷ್ಮೀಶ

VI. **ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** $1 \times 3 = 3$

30. ಬೇಡ ನಿನಗೇಕೆ ಸಾಹಸ

ಡಾಂಬರಮೆನ್ನೊಳಾಹವಕ್ಕನುಗುಣನಂ

VII. **ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** $1 \times 3 = 3$

31. ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ ?

VIII. **ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ :** $1 \times 3 = 3$

32. ಶಕ್ತಿಗಿಂತ ಯುಕ್ತಿ ಮೇಲು

***ಅಥವಾ***

ಗಿಡವಾಗಿ ಬಗ್ಗದ್ದು; ಮರವಾಗಿ ಬಗ್ಗೀತೆ

IX. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : $6 \times 3 = 18$

33. "ಕಣ್ಣ ನೀರಿದೇಕೆ ತಾಯೆ, ತುಸವೂಣೆಯವಿಲ್ಲ"

34. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ"

35. "ತಸ್ಕರಸ್ಯಾನೃತಂ ಬಲಂ"

36. "ಚಟಿಕಾರರು ಚೌಕಿ ಮಾಡುತ, ನಡಿದರೊ ಹೇಳದೆ ಗುಡದಾಗ"

37. "ಹೊಸಗಾಲದ ಹಸುಮಕ್ಕಳ ಹರಸಿ"

38. "ನೊಳವಿಂಗೆ ಕುಪ್ಪೆ ವರಂ"

X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : $1 \times 4 = 4$

39. ಮತಗಳೆಲ್ಲವೂ ..........................................................

..........................................................

..........................................................

.................................................. ಬಿತ್ತೋಣ.

***ಅಥವಾ***

ಕಲುಷಿತವಾದೀ ..........................................................

..........................................................

..........................................................

.................................................. ಮುಟ್ಟೋಣ.

XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : $1 \times 4 = 4$

40. ನೆಲಕಿಱಿವೆನೆಂದು ಬಗೆದಿರೆ ।

ಚಲಕಿಱಿವೆಂ ಪಾಂಡುಸುತರೊಳೀನೆಲನಿದು ಪಾ ।।

ೞ್ನೆಲನೆನಗೆ ದಿನಪಸುತನಂ ।

ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ವೆಪೆನೇ ।।

XII. **ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $2 \times 4 = 8$

41. 'ಮಾದರಿ ಮೈಸೂರು ರಾಜ್ಯ' ನಿರ್ಮಾಣ ಮಾಡುವಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳನ್ನು ವಿವರಿಸಿ.

***ಅಥವಾ***

ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿ ಶಿಕ್ಷಣ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

42. ಕವಿ ಕುವೆಂಪುರವರ ಪ್ರಕೃತಿಯೊಂದಿಗಿನ ಅದ್ವೈತಭಾವವು ಹಸುರು ಪದ್ಯದಲ್ಲಿ ಹೇಗೆ ಮೂಡಿಬಂದಿದೆ ಎಂದು ವಿವರಿಸಿ.

***ಅಥವಾ***

ಕುವೆಂಪುರವರ ಪ್ರಕೃತಿ ತನ್ಮಯತೆಯ ಮಲೆನಾಡ ಸೊಬಗು ಹಸುರು ಪದ್ಯದಲ್ಲಿ ಹೇಗೆ ಚಿತ್ರಣಗೊಂಡಿದೆ ಎಂದು ವಿವರಿಸಿ.

XIII. **ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** $2 \times 2 = 4$

ಚಾರ್ಲಿ ಚಾಪ್ಲಿನ್‌ನ ಕಲಾವಂತಿಕೆ ಎಲ್ಲಾ ದೇಶಗಳ ಜನರನ್ನು ಮುಗ್ಧಗೊಳಿಸಿದೆ. ಏಷ್ಯಾದ ಜನಸ್ತೋಮ, ಯುರೋಪಿನ ಜನತೆ, ಆಫ್ರಿಕದ ನೀಗ್ರೋಗಳು – ಎಲ್ಲರಿಗೂ ಅವರು ಪ್ರಿಯರಾಗಿರುವುದಕ್ಕೆ ಅವರ ಈ ಮಾನವತೆಯೇ ಕಾರಣ. ಚಲನಚಿತ್ರದ ಭಾಷೆ ಆಡುವ ಮಾತಿನ ಭಾಷೆಯಲ್ಲ. ಅದು ನಾಟಕದ ಭಾಷೆಯಾಯಿತು. ಆದರೆ ಚಲನಚಿತ್ರ 'ಒಂದು ಹೊಸ ಕಲಾಪ್ರಕಾರ'. ಈ ಹೊಸ ಕಲಾಪ್ರಕಾರಕ್ಕೆ ಹೊಸ ಭಾಷೆಯೇ ಬೇಕು. ಈ ಭಾಷೆ ಆಡುವ ಮಾತಿನದಲ್ಲ, ಅಭಿನಯದ್ದು, ಸನ್ನೆಯದು. ಇದು ಚಾರ್ಲಿ ಚಾಪ್ಲಿನ್‌ರ ಅಭಿಪ್ರಾಯ. ಆದರೆ ಹಲವು ಚಲನಚಿತ್ರ ತಯಾರಕರು ಇದನ್ನರಿತಿಲ್ಲ. ಆಡುವ ಮಾತಿಗೆ ಅವರು ಅಭಿನಯವನ್ನು ಹೊಂದಿಸುತ್ತಾರೆ. ಚಾರ್ಲಿಯ ಚಿತ್ರದಲ್ಲಿ ತದ್ವಿರುದ್ಧ ಅಭಿನಯವೇ ಪ್ರಧಾನ; ಮಾತು ಗೌಣ; ಅದು ಇಲ್ಲದಿದ್ದರೂ ಸರಿಯೇ. ಅಂತೆಯೇ ಚಾಪ್ಲಿನ್‌ರ ದೇಹದ ಪ್ರತಿಭಾಗವೂ ಪ್ರೇಕ್ಷಕರಿಗೆ

ಭಾವಸಮಾರಾಧನೆಯ ಅಭಿನಯ ನೀಡುತ್ತದೆ. ಅವರ ದೇಹ ವೀಣೆಯಂತೆ ಮಿಡಿಯುವ ತಂತಿ. ಮಾತಿಗೆ ಮೀರಿದ ಭಾವಪ್ರಕಟ–ಅಂತಃಕರಣಕ್ಕೆ ತಾಗುವ ರಸದೌತಣ–ಇದು ಅವರ ಗುರಿ. ಅವರ ಚಿತ್ರ ಪರದೆಯ ಮೇಲೆ ಬೀಳುವ ನಿರ್ಜೀವ ಛಾಯೆಯಲ್ಲ, ಅದು ಸಜೀವ. ಬೇಕಾದರೆ ನೀವು ಚಾರ್ಲಿಗೆ ಕಚಗುಳಿಯಿಡಬಹುದು. ಅವರನ್ನು ಅಳಿಸಬಹುದು, ಉದ್ರೇಕಗೊಳಿಸಬಹುದು ಎನ್ನುವಷ್ಟು ಸಜೀವ. ಮಾತಿಗೆ ಮೀರಿದ ಈ ಅಭಿನಯ ಚಾತುರ್ಯದಿಂದಲೇ ಚಾರ್ಲಿ ಚಾಪ್ಲಿನ್ ಎಲ್ಲಾ ದೇಶಗಳ, ಎಲ್ಲಾ ವರ್ಗಗಳ ಜನರಿಗೂ ಪ್ರಿಯರಾಗಿರುವುದು.

ಎ.ಜಿ. ಗಾರ್ಡಿನರ್ ಎಂಬ ಲೇಖಕರು ಚಾರ್ಲಿ ಚಾಪ್ಲಿನರನ್ನು ಚಾರ್ಲ್ಸ್ ಡಿಕನ್ಸ್‌ನಿಗೆ ಹೋಲಿಸುತ್ತಾರೆ. ಇಬ್ಬರೂ ಮಾನವತಾವಾದಿಗಳು. ಇಬ್ಬರೂ ಬಡತನದಲ್ಲಿ ಬೆಳೆದವರು. ಆದರೆ ಡಿಕನ್ಸ್ ಲೇಖಕ. ಚಾರ್ಲಿ ಚಾಪ್ಲಿನ್ ಚಲನಚಿತ್ರ ನಟ. ಚಲನಚಿತ್ರದ ಅವತಾರವಾಗದಿದ್ದರೆ ಚಾಪ್ಲಿನ್ ಬಹುಶಃ ಲೇಖಕರೋ, ರಂಗಭೂಮಿಯ ನಟರೋ ಆಗುತ್ತಿದ್ದರೇನೋ ಎಂದು ಊಹಿಸುವುದು ಕಷ್ಟ. ಅಂತಹ ಚಾಪ್ಲಿನ್, ಡಿಕನ್ಸ್ ಇಬ್ಬರೂ ಬಡತನದ ಆಡುಂಬೊಲದಲ್ಲಿ ಆಟವಾಡಿದರು. ಸಾಮಾನ್ಯ ಜನರನ್ನು, ಸಂತೆಯ ನೆರವಿಯನ್ನು, ಪತಿತರನ್ನು ಚಿತ್ರಿಸುವುದರಲ್ಲೇ–ಇಬ್ಬರಿಗೂ ಆಸಕ್ತಿ. ಡಿಕನ್ಸ್‌ನ ಕಾದಂಬರಿಗಳನ್ನು ಓದಿದಾಗ ಆತನ ಪಾತ್ರ ನಿರೂಪಣಾ ಕೌಶಲವನ್ನು, ಆತ ರಚಿಸಿರುವ ಪಾತ್ರ ವೈವಿಧ್ಯವನ್ನೂ ಕಂಡು ಬೆರಗಾಗುತ್ತದೆ. ಜನ ಜಂಗುಳಿಯ ಅಳು–ನಗು, ಕೋಪ–ಕನಿಕರ, ದ್ವೇಷ–ಸ್ನೇಹ, ಮಮತೆ–ಮಾತ್ಸರ್ಯ, ಮಿತಿ–ವೈಪರೀತ್ಯ ಇವುಗಳನ್ನು ಕಂಡು ಅಂತಃಕರಣ ಮೃದುವಾಗುತ್ತದೆ. ಕೊನೆಗೆ ಹೊರಡುವುದು ಒಂದು ನಿಟ್ಟುಸಿರು, ಅಸಹಾಯಕತೆಯ ಉದ್ಗಾರ. ಈ ಜಂಗುಳಿಯಲ್ಲಿ ವ್ಯಕ್ತಿಶಃ ಒಬ್ಬೊಬ್ಬರೂ ಸನ್ನಿವೇಶದ ಶಿಶುಗಳು. ಅವರ ಬವಣೆಯನ್ನು ಕಂಡು ಮರುಗಬೇಕಷ್ಟೆ. ಬಿಡುಗಡೆ ? ಎಂದೋ ಹೇಗೋ–ಯಾರು ಬಲ್ಲರು ? ಡಿಕನ್ಸ್‌ನ ಊಹೆಗೆ ನಿಲುಕದ ವಿಷಯ ಅದು.

43. *ಪ್ರಶ್ನೆಗಳು :*

ಅ) ಚಾರ್ಲಿ ಚಾಪ್ಲಿನ್ ಚಲನಚಿತ್ರವನ್ನು ಒಂದು ಹೊಸ ಕಲಾಪ್ರಕಾರವಾಗಿ ಹೇಗೆ ರೂಪುಗೊಳಿಸಿದರು ?

ಬ) ಚಾರ್ಲಿ ಚಾಪ್ಲಿನ್ ಮತ್ತು ಚಾರ್ಲ್ಸ್ ಡಿಕನ್ಸ್ ಇವರಿಬ್ಬರಲ್ಲಿರುವ ಸಾಮ್ಯತೆಗಳನ್ನು ತಿಳಿಸಿ.

XIV. **ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :** 1 × 5 = 5

44. ನಿಮ್ಮನ್ನು ಬಾಗಲಕೋಟೆಯ ಸರ್ಕಾರಿ ಪ್ರೌಢಶಾಲೆಯ 'ಸೃಜನ್' ಎಂದು ಭಾವಿಸಿಕೊಂಡು ಅತಿವೃಷ್ಟಿಯಿಂದಾದ ತೊಂದರೆಗಳಿಗೆ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ಬರೆಯಿರಿ.

***ಅಥವಾ***

ನಿಮ್ಮನ್ನು ರಾಯಚೂರಿನ ಸರ್ಕಾರಿ ಪ್ರೌಢಶಾಲೆಯ 'ಸುಬೋಧ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ಕೈಗೊಂಡ ಶಾಲಾ ಶೈಕ್ಷಣಿಕ ಪ್ರವಾಸದ ಅನುಭವಗಳನ್ನು ವಿವರಿಸಿ ಕಲಬುರಗಿಯ ಶರಣಬಸವೇಶ್ವರ ಬಡಾವಣೆಯಲ್ಲಿ ವಾಸವಾಗಿರುವ 'ರಮೇಶ' ಎಂಬ ಹೆಸರಿನ ಗೆಳೆಯನಿಗೊಂದು ಪತ್ರವನ್ನು ಬರೆಯಿರಿ.

XV. **ಈ ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** 1 × 5 = 5

45. ಕರ್ನಾಟಕದ ಪ್ರಾಕೃತಿಕ ಸಂಪತ್ತು.

***ಅಥವಾ***

ಹೆಣ್ಣು ಮಕ್ಕಳಿಗೆ ಸರ್ಕಾರದ ಸೌಲಭ್ಯಗಳು.